ಗಣಕೀಕೃತ ಪಡಿತರ ಚೀಟಿಯನ್ನು ನೀಡಲು ಉದ್ದೇಶಿಸಿದ್ದು ಎಲ್ಲಾ ಮಾಹಿತಿ ಸಿದ್ದಗೊಳಿಸಿ, ಸ್ಕಾನ್ ಮಾಡಿ, ಡಾಟಾ ಎಂಟ್ರಿ ಮಾಡಲಾಗಿದೆ. ನಂತರ ತಪಶೀಲು ಪಟ್ಟಿ ಪರಿಶೀಲಿಸಿ, ತಾತ್ಕಾಲಿಕ ಪಡಿತರ ಚೀಟಿ ವಿತರಿಸುವ ಕಾರ್ಯ ಆರಂಭವಾಗಿದ್ದು, ಪ್ರಗತಿಯಲ್ಲಿರುತ್ತದೆ.

ಊ) ತಾತ್ಕಾಲಿಕ ಪಡಿತರ ಚೀಟಿ ವಿತರಿಸುವ ಕಾರ್ಯ ಆರಂಭವಾಗಿದ್ದು, ಪ್ರಗತಿಯಲ್ಲಿರುತ್ತದೆ.

ತಾತ್ಕಾಲಿಕ ಕೂವನ್‌ಗಳನ್ನು ವಿತರಿಸಿದ ಫಲಾನುಭವಿಗಳಿಗೆ 15ನೇ ನವೆಂಬರ್ 2006ರ ಒಳಗಾಗಿ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

**ಟಾಸ್ಕ್ – ಫೋರ್ಸ್**

342 (1560) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2006–07ರಲ್ಲಿ ಶಾಸಕರ ನೇತೃತ್ವದ ಟಾಸ್ಕ್–ಫೋರ್ಸ್ ಸಮಿತಿಗೆ ಮಂಜೂರಾದ ಅನುದಾನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ;

ಆ) ಟಾಸ್ಕ್–ಫೋರ್ಸ್ ನೀಡಿದ ಕಾಮಗಾರಿ ಅನುಷ್ಠಾನಗೊಂಡಿದ್ದರೂ ಇನ್ನೂ ಹಣ ಬಿಡುಗಡೆಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಇದರ ಬಗ್ಗೆ ಸರ್ಕಾರದ ಕ್ರಮವೇನು ?

ಶ್ರೀ ಎಸ್.ಎ. ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು) –

ಅ) 2006–07ರ ಸಾಲಿನಲ್ಲಿ ಟಾಸ್ಕ್‌ಫೋರ್ಸ್ ಸಮಿತಿಗಳಿಗೆ ಅನುದಾನ ಬಿಡುಗಡೆಯಾಗಿಲ್ಲ.

ಆ) ಬಂದಿದೆ.

ಇ) ಅಗತ್ಯತೆಯನ್ವಯ ವಾಸ್ತವಿಕವಾಗಿ ಕಾರ್ಯಪಡೆ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಿರುವ ಕ್ರಿಯಾ ಯೋಜನೆಯ ತುರ್ತು ಕಾಮಗಾರಿಗಳಿಗೆ ಜುಲೈ–2006ರಲ್ಲಿ ಸ್ವಲ್ಪ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.